ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಬಿ. ರಾಚಯ್ಯ.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರಗಳ ಪಟ್ಟಿಯನ್ನು ಮಂಡಿಸಲಾಯಿತು.

ಸಣ್ಣ ನೀರಾವರಿ ಕೆರೆಗಳ ನಿರ್ಮಾಣದಲ್ಲಿ ಜಮೀನು ಕಳೆದುಕೊಂಡ ರೈತರಿಗೆ ಪರಿಹಾರ ನೀಡುವ ಬಗ್ಗೆ

೧೩೧ (ಅಳ) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ:—

ಅ) ಧಾರವಾಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕೆರೆಗಳ ನಿರ್ಮಾಣ ಕಾರ್ಯದಲ್ಲಿ ಮುಳುಗಡೆಯಾಗಿರುವ ಜಮೀನಿನ ವಿಸ್ತೀರ್ಣವೆಷ್ಟು ?

ಆ) ಮುಳುಗಡೆಯಾದ ಜಮೀನುಗಳಿಗೆ ಸರಕಾರ ಪರಿಹಾರ ನೀಡಿದೆಯೇ?

ಇ) ರೋಣ ತಾಲೂಕಿನಲ್ಲಿ ಸಣ್ಣ ನೀರಾವರಿ ಕೆರೆಗಳ ನಿರ್ಮಾಣದಿಂದ ಮುಳುಗಡೆ ಆಗಿರುವ ಜಮೀನುಗಳಿಗೆ ಪರಿಹಾರ ನೀಡಲಾಗಿದೆಯೇ ?

ಈ) ಹಾಗಿಲ್ಲದಿದ್ದಲ್ಲಿ, ಕೂಡಲೆ ಪರಿಹಾರ ನೀಡಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್.ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ೨,೬೨೨ ಎಕರೆ ೨೬ ಗುಂಟೆ ಮುಳುಗಡೆ ಆಗಿರುತ್ತೆ.

ಆ) ಹೌದು (೧೬೫೨ ಎಕರೆ ೨೮ ಗುಂಟೆ ವಿಸ್ತೀರ್ಣಕ್ಕೆ) ಪರಿಹಾರ ಕೊಡಲಾಗಿದೆ.

ಇ) ೧೯೬ ಎಕರೆ ೩೯ ಗುಂಟೆ ಜಮೀನನ್ನು ವಶಪಡಿಸಿಕೊಂಡಿದ್ದು ೧೩೯ ಎಕರೆ ೨೪ ಗುಂಟೆಗೆ ಪರಿಹಾರ ಧನ ನೀಡಲಾಗಿದೆ.

ಈ) ೫೭ ಎಕರೆ ೧೫ ಗುಂಟೆ ಕ್ಷೇತ್ರಕ್ಕೆ ಪರಿಹಾರಧನ ನೀಡಬೇಕಾಗಿದೆ. ೩ ಪ್ರಕರಣಗಳು ಐತಿಪ್ಪು ರಚನೆಗೆ ಬಾಕಿ ಇದ್ದು ಕೂಡಲೇ ಅಂತಿಮಗೊಳಿಸಲು ಸಂಬಂಧಪಟ್ಟವರಿಗೆ ಆದೇಶ ನೀಡಲಾಗಿದೆ.

ವರಾಹಿ ಜಲವಿದ್ಯುತ್ ಯೋಜನೆಯಲ್ಲಿ ಮುಳುಗಡೆಯಾದ ಕುಟುಂಬಗಳಿಗೆ ಕೆಲಸ ನೀಡುವ ಬಗ್ಗೆ

೧೩೬ (೫೧೩) ಶ್ರೀ ಪಟವಕ್ಕಿ ರತ್ನಾಕರ (ತೀರ್ಥಹಳ್ಳಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ವಿದ್ಯುತ್ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ:—

ಅ) ವರಾಹಿ ಜಲವಿದ್ಯುತ್ ಯೋಜನೆಯಲ್ಲಿ ಉದ್ಯೋಗ ಕಲ್ಪಿಸುವಾಗ ಸದರಿ ಯೋಜನೆಯಿಂದ ಮುಳುಗಡೆ ಪ್ರದೇಶದ ರೈತರ ಪ್ರತಿಯೊಂದು ಕುಟುಂಬದಲ್ಲಿ ಕನಿಷ್ಟ ಒಬ್ಬ ಸದಸ್ಯನಿಗೆ ಪ್ರಾತಿನಿಧ್ಯ ನೀಡುವ ಬಗ್ಗೆ ಸರಕಾರದ ಆದೇಶ ಇದೆಯೆ?

ಆ) ಹಾಗಿದ್ದಲ್ಲಿ ಇತ್ತೀಚೆಗೆ ನಡೆದ ಸೆಕ್ಯೂರಿಟಿ ವಾಚ್‌ಮನ್ ಹಾಗೂ ಅಸಿಸ್ಟೆಂಟ್ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯುವಾಗ ಮುಳುಗಡೆಯಾದ ಪ್ರದೇಶದ ಕುಟುಂಬದವರಿಗೆ ಅವಕಾಶ ಕಲ್ಪಿಸಲಾಗಿದೆಯೆ; ಹಾಗೂ ಈವರೆಗೆ ಉಳಿದ ವಿವಿಧ ಹುದ್ದೆಗಳಲ್ಲಿ ಅಂತಹ ಎಷ್ಟು ಕುಟುಂಬಗಳ ಎಷ್ಟು ಸದಸ್ಯರಿಗೆ ಪ್ರಾತಿನಿಧ್ಯ ನೀಡಲಾಗಿದೆ?

ಇ) ಸಂದರ್ಶನದಲ್ಲಿ ಬೇರೆ ಪ್ರದೇಶದ ಎಷ್ಟು ಜನರಿಗೆ ಅವಕಾಶ ನೀಡಲಾಗಿದ್ದಿತು; ಈ ಆಯ್ಕೆಗಳಲ್ಲಿ ಅಕ್ರಮ ವ್ಯವಹಾರ ನಡೆದಿದೆ ಎಂದು ದೂರಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಜೆ.ಎಸ್. ದೇಶಮುಖ್(ಮಾನ್ಯ ವಿದ್ಯುತ್, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).—

ಅ) ಚಕ್ರಾ ಮತ್ತು ವರಾಹಿ ಪುನರ್ವಸತಿ ಕ್ರಮದ ಬಗ್ಗೆ ಕರ್ನಾಟಕ ಸರ್ಕಾರ ಹೊರಡಿಸಲಾದ ಆದೇಶ ಕ್ರ.ಸಂ. ಆರ್‌ಡಿ ೪೮ ಎಕ್ಸ್‌ಎಸ್ ೮೩ ದಿನಾಂಕ ೨೫-೮-೮೩ರಲ್ಲಿ ಕುಶಲ (skilled) ಕುಶಲವಲ್ಲದ (unskilled) ಹುದ್ದೆಗಳಿಗೆ ನೇಮಕ ಮಾಡುವಾಗ ಮುಳುಗಡೆಯಾದ ಪ್ರದೇಶದ ಕುಟುಂಬದ ಒಬ್ಬ ಸದಸ್ಯನಿಗೆ ಆದ್ಯತೆ ನೀಡಬೇಕೆಂದು ಸೂಚಿಸಲಾಗಿದೆ. ಆದರೆ ಕಾರ್ಯಪ್ರಮಾಣ ಸಮರ್ಥನೀಯವಲ್ಲದ ಹುದ್ದೆಗಳನ್ನು ಈ ಉದ್ದೇಶಕ್ಕಾಗಿಯೇ ವಿಶೇಷವಾಗಿ ಮಂಜೂರಾತಿ ಮಾಡಬಾರದೆಂದೂ ಇದೇ ಆದೇಶದಲ್ಲಿ ಸೂಚಿಸಲಾಗಿದೆ.

ಆ) ೧. ಸೆಕ್ಯೂರಿಟಿ ವಾಚ್‌ಮನ್ ಹುದ್ದೆಗಳಿಗೆ ನೇಮಕಾತಿ ಮಾಡಲು ಸಂದರ್ಶನವನ್ನು ಯೋಜಿಸಲಾಗಿದ್ದು ಸಧ್ಯದಲ್ಲಿಯೇ ನಡೆಸಲಾಗುವುದು.

೨. ಅಸಿಸ್ಟೆಂಟ್ ಹುದ್ದೆಗಳ ಬಗ್ಗೆ ಹೇಳುವುದಾದರೆ ಇತ್ತೀಚೆಗೆ ಅಂದರೆ ಮೇ ೮೫ರಲ್ಲಿ ನಿಗಮದ ಒಂದು ಸಮಿತಿಯು ನಿಗಮದಲ್ಲೇ ಕೆಳ ಹುದ್ದೆಯಲ್ಲಿರುವ ಮತ್ತು ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿರುವ ನೌಕರರನ್ನು ಮಾತ್ರ ಆಯ್ಕೆ ಮಾಡಲಾಗಿದೆ.

೩. ಈವರೆಗೆ ಚಕ್ರಾ ಮತ್ತು ವರಾಹಿ ಯೋಜನೆಗಾಗಿ ಮುಳುಗಡೆಯಾದ ಸ್ವಾಧೀನ ಪಡಿಸಿಕೊಂಡ ಪ್ರದೇಶಕ್ಕೆ ಸೇರಿದ ಮತ್ತು ನಮ್ಮ ನಿಗಮದ ಹುದ್ದೆಗಳಿಗೆ ತಕ್ಕ ವಿದ್ಯಾರ್ಹತೆ ಮತ್ತು ಕುಶಲತೆಯುಳ್ಳ ೯೩ ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗಿದೆ.

ಇ) ಈ ಪ್ರಶ್ನೆಯು ಸೆಕ್ಯೂರಿಟಿ ವಾಚ್‌ಮನ್ ಹುದ್ದೆ ಬಗ್ಗೆ ಉದ್ಭವಿಸುವುದಿಲ್ಲ. ಆದರೆ ಅಸಿಸ್ಟೆಂಟ್ ಹುದ್ದೆಗಳ ಬಗ್ಗೆ ಹೇಳುವುದಾದರೆ ನಿಗಮದ ಎಲ್ಲಾ ಕಛೇರಿಗಳಲ್ಲಿ ಕೆಲಸ ಮಾಡುತ್ತಿರುವ ಮತ್ತು ತಕ್ಕ ವಿದ್ಯಾರ್ಹತೆಯನ್ನು ಹೊಂದಿರುವ ೭೭ ನೌಕರರನ್ನು (ವರಾಹಿ ಯೋಜನೆಯ ೧೮ ನೌಕರರೆಲ್ಲರೂ ಸೇರಿದಂತೆ) ಸಮಿತಿಯು ಆದರನ್ನು ಸೂಕ್ಷ್ಮ ಮತ್ತು ಅರ್ಹತೆ ಆಧಾರದ ಮೇಲೆ ಮಾತ್ರ ಆಯ್ಕೆ ಮಾಡಿದೆ. ಈ ಆಯ್ಕೆಯ ಬಗ್ಗೆ ಯಾವುದೇ ವಿಧವಾದ ದೂರುಗಳು ಬಂದಿರುವುದಿಲ್ಲ.

ರಾಜ್ಯದಲ್ಲಿನ ಬರಗಾಲ ಪರಿಸ್ಥಿತಿ

೧೩೭(೭೪೦) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದ ಎಷ್ಟು ಜಿಲ್ಲೆಗಳು ಬರಗಾಲ ಪರಿಸ್ಥಿತಿಗೆ ತುತ್ತಾಗಿವೆ ?

ಆ) ಬರಗಾಲ ಪರಿಹಾರ ಕಾಮಗಾರಿಗಳಿಗಾಗಿ ಎಷ್ಟು ಹಣವನ್ನು ಈಗಾಗಲೇ ವಿಚ್ರ್ಯು ಮಾಡಲಾಗಿದೆ?

ಇ) ವಿವಿಧ ಕೆಲಸಗಳಿಗಾಗಿ ವಿಚ್ರ್ಯಾಗಿರುವ ಹಣ ಎಷ್ಟು ? ಹಾಗೂ ಇದರಿಂದ ಎಷ್ಟು ಕೂಲಿಗಾರರಿಗೆ ಕೆಲಸ ನೀಡಲಾಗಿದೆ ?

ಈ) ಬರಗಾಲ ಪರಿಹಾರ ಕಾಮಗಾರಿಗಳ ಉಸ್ತುವರಿಗಾಗಿ ಪ್ರತಿ ಬರಗಾಲ ಪೀಡಿತ ತಾಲ್ಲೂಕಿನಲ್ಲಿಯೂ ಸರ್ವ ಪಕ್ಷಗಳ ಸಮಿತಿಯನ್ನು ನೇಮಿಸುವ ಭರವಸೆಯನ್ನು ಸರಕಾರ ನೀಡುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—

ಅ) ೧೯೮೪ರಲ್ಲಿ ರಾಜ್ಯದ ೧೯ ಜಿಲ್ಲೆಗಳ ಪೈಕಿ ೧೭ ಜಿಲ್ಲೆಗಳನ್ನು ಅಭಾವಕ್ಕೊಳಗಾದ ಜಿಲ್ಲೆಗಳೆಂದು ಗುರುತಿಸಲಾಗಿತ್ತು (ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳನ್ನು ಬಿಟ್ಟು) ಈ ಭಾರಿ ಅಂದರೆ ೧-೮-೧೯೮೫ಕ್ಕೆ ರಾಜ್ಯದ ೧೭ ಜಿಲ್ಲೆಗಳನ್ನು ಅಭಾವ ಪೀಡಿತವೆಂದು ಗುರುತಿಸಲಾಗಿದೆ. (ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗಳನ್ನು ಬಿಟ್ಟು)